399 (818) ಶ್ರೀ ಪದ್ಮನಾಭ ಕೊಟ್ಟಾರಿ ಕೆ (ವಿಟ್ಲ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಸ್ತುತ ವಿದ್ಯುತ್ ಕಡಿತ (ಲೋಡ್ ಶೆಡ್ಡಿಂಗ್) ಪದ್ಧತಿಯನ್ನು ಜಾರಿಗೊಳಿಸಲಾಗಿದೆಯೇ (ವಿವರಗಳನ್ನು ಒದಗಿಸುವುದು),

ಆ) ಹಾಗಿದ್ದಲ್ಲಿ ಯಾವ ಕಾರಣಕ್ಕಾಗಿ ವಿದ್ಯುತ್ ಕಡಿತ ಪದ್ಧತಿಯನ್ನು ಜಾರಿಗೆ ತರಲಾಯಿತು,

ಇ) ನಿರಂತರ ವಿದ್ಯುತ್ ಸರಬರಾಜನ್ನು ಮಾಡಲು ಸರ್ಕಾರದ ಆದ್ಯತಾ ಕ್ರಮಗಳೇನು,

ಈ) ವಿದ್ಯುತ್ ದರ ನಿಗದಿಪಡಿಸುವಲ್ಲಿ ಸರ್ಕಾರ ಅನುಸರಿಸುತ್ತಿರುವ ಪ್ರದೇಶವಾರು ಮಾನದಂಡಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಹೌದು ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಸಾಮಾನ್ಯವಾಗಿ ಪ್ರತಿ ದಿನ 9 ಗಂಟೆಗಳ ಅವಧಿಗೆ 3 ಫೇಸ್‌ನಲ್ಲಿ ಹಾಗೂ 9 ಗಂಟೆಗಳ ಅವಧಶಿಗೆ ಸಿಂಗಲ್ ಫೇಸ್ ನಲ್ಲಿ ವಿದ್ಯುತ್ತನ್ನು ಒದಗಿಸಲಾಗುತ್ತಿದೆ 6 ಗಂಟೆಗಳ ಅವಧಿಗೆ ವಿದ್ಯುತ್ ಸರಬರಾಜು ಇರುವುದಿಲ್ಲ

ಆ) ಪ್ರಸಕ್ತ ಸಾಲಿನಲ್ಲಿ (2006–07) ರಾಜ್ಯದ ಅನಿರ್ಬಂಧಿತ ವಿದ್ಯುತ್ ಬೇಡಿಕೆ 41869 ದಶಲಕ್ಷ ಯೂನಿಟ್‌ಗಳೆಂದು ಹಾಗೂ ಈ ಅವಧಿಯಲ್ಲಿ ಎಲ್ಲಾ ಮೂಲಗಳಿಂದ ಲಭ್ಯವಾಗುವ ವಿದ್ಯುತ್ ಪ್ರಮಾಣ 38,057 ದಶಲಕ್ಷ ಯೂನಿಟ್ ಗಳೆಂದು ಅಂದಾಜು ಮಾಡಲಾಗಿದೆ ಆದುದರಿಂದ, ಪ್ರಸಕ್ತ ವರ್ಷವಾದ 2006–07 ರಲ್ಲಿ ರಾಜ್ಯವು ಅನುಭವಿಸಬಹುದಾದ ವಿದ್ಯುತ್ ಕೊರತೆ ಸುಮಾರು 3812 ದಶಲಕ್ಷ ಯೂನಿಟ್‌ಗಳು ಈ ವಿದ್ಯುತ್ ಕೊರತೆಯನ್ನು ಸರಿದೂಗಿಸಲು ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ನಿಯಮಿತ ಲೋಡ್ ಶೆಡ್ಡಿಂಗ್‌ನ ನಿರ್ವಹಣೆ ಅನಿವಾರ್ಯವಾಗಿರುತ್ತದೆ

ಇ) ರಾಜ್ಯವು ಪ್ರಸ್ತುತ ಅನುಭವಿಸುತ್ತಿರುವ ವಿದ್ಯುತ್ ಕೊರತೆಯನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡುವ ಉದ್ದೇಶದಿಂದ ಎಲ್ಲಾ ಸ್ವತಂತ್ರ ವಿದ್ಯುತ್ ಉತ್ಪಾದಕರುಗಳಿಗೆ ಉತ್ಪಾದಿಸಲಾಗುವ ವಿದ್ಯುತ್ತನ್ನು ರಾಜ್ಯದ ಗ್ರಿಡ್ ಗೆ ರವಾನಿಸುವಂತೆ ಸೂಚನೆಯನ್ನು ನೀಡಲಾಗಿರುತ್ತದೆ ಅಲ್ಲದೇ, ಕೇಂದ್ರ ವಿದ್ಯುತ್

ಉತ್ಪಾದನಾ ಕೇಂದ್ರಗಳಿಂದ ರಾಜ್ಯದ ಪಾಲನ್ನು ಪೂರ್ಣ ಪ್ರಮಾಣದಲ್ಲಿ ಪಡೆಯಲಾಗುತ್ತಿದೆ

ದೀರ್ಘಕಾಲಿಕ ಕ್ರಮವಾಗಿ ಹಲವಾರು ಹೊಸ ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕಾರ್ಯಯೋಜನೆಯನ್ನೂ ಸಹ ಹಮ್ಮಿಕೊಳ್ಳಲಾಗಿದ್ದು, ವಿವರಗಳು ಈ ಕೆಳಕಂಡಂತಿವೆ

1 500 ಮೆ ವ್ಯಾಟ್ ಸಾಮರ್ಥ್ಯದ ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಕಾಮಗಾರಿಯು ಭರದಿಂದ ಸಾಗುತ್ತಿದೆ

2 ವರಾಹಿ ಜಲ ವಿದ್ಯುತ್ ಯೋಜನೆಯ 230 ಮೆ ವ್ಯಾಟ್ ಸಾಮರ್ಥ್ಯದ 2ನೇ ಹಂತ ಕಾಮಗಾರಿಯು ಪ್ರಗತಿಯಲ್ಲಿದೆ

3 ಖಾಸಗಿ ವಲಯದಲ್ಲಿ ನಾಗಾರ್ಜುನ ಪವರ್ ಕಾರ್ಪೊರೇಷನ್ ಕಂಪನಿ ಸಂಸ್ಥೆಯು ಮಂಗಳೂರು ಬಳಿ ಸ್ಥಾಪಿಸುತ್ತಿರುವ 1015 ಮೆ ವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರದ ಕಾಮಗಾರಿಯು ಪ್ರಾರಂಭದ ಹಂತದಲ್ಲಿದೆ

4 ಕೇಂದ್ರ ಸರ್ಕಾರದ ವತಿಯಿಂದ ಕೈಗಾ ಅಣು ವಿದ್ಯುತ್ ಕೇಂದ್ರದಲ್ಲಿ ಸ್ಥಾಪಿಸಲಾಗುತ್ತಿರುವ ಒಟ್ಟು 440 ಮೆ ವ್ಯಾಟ್ ಸಾಮರ್ಥ್ಯದ 3 ಮತ್ತು 4ನೇ ಘಟಕಗಳ ಕಾಮಗಾರಿಗಳು ಪ್ರಗತಿಯಲ್ಲಿವೆ ಇದರಿಂದ 107 ಮೆ ವ್ಯಾಟ್‌ನಷ್ಟು ವಿದ್ಯುತ್‌ನ್ನು ರಾಜ್ಯದ ಪಾಲಾಗಿ ಪಡೆಯಲಾಗುವುದು

5 ಕರ್ನಾಟಕ ಸರ್ಕಾರವು 11ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ರಾಜ್ಯದ ಹಲವೆಡೆ ಒಟ್ಟು 4000 ಮೆ ವ್ಯಾಟ್ ಸಾಮರ್ಥ್ಯದ ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳ ನಿರ್ಮಾಣ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ವಿದ್ಯುತ್ ನಿಗಮ ನಿಯಮಿತಕ್ಕೆ ತನ್ನ ದಿನಾಂಕ 13 7 2006ರ ಆದೇಶದ ಮೂಲಕ ನಿಯೋಜಿಸಿದೆ

6 ಕೇಂದ್ರ ಸರ್ಕಾರದ ವತಿಯಿಂದ ತದ್ರಿ, ಗಿರಿ, ಕೃಷ್ಣಾಪಟ್ಟಂ ಮತ್ತು ಕೋಸ್ವಲ್ ತಮಿಳುನಾಡು ಪವರ್ ಲಿಮಿಟೆಡ್ ಗಳಲ್ಲಿ ಸ್ಥಾಪಿಸಲಾಗುತ್ತಿರುವ ಅಲ್ಟ್ರಾ ಮೆಗಾ ಪವರ್ ಪ್ರಾಜೆಕ್ಟ್ ಗಳಿಂದ ಅನುಕ್ರಮವಾಗಿ 1,500 ಮೆ ವ್ಯಾಟ್ 500 ಮೆ ವ್ಯಾಟ್ 800 ಮೆ

ವ್ಯಾಟ್ ಮತ್ತು 800 ಮೆ ವ್ಯಾಟ್ ವಿದ್ಯುತ್ ನ್ನು ರಾಜ್ಯವು ತನ್ನ ಪಾಲಾಗಿ ಪಡೆಯಲು ಬದ್ಧವಾಗಿರುತ್ತದೆ

7 11ನೇ ಪಂಚವಾರ್ಷಿಕ ಯೋಜನೆಯ ಅಂತ್ಯದೊಳಗೆ ಖಾತರಿಗೊಂಡಿರುವ ವಿದ್ಯುತ್ ಉತ್ಪಾದನಾ ಯೋಜನೆಗಳ ಮೂಲಕ ಒಟ್ಟು 3,336 ಮೆ ವ್ಯಾಟ್ ನಷ್ಟು ವಿದ್ಯುತ್ ಉತ್ಪಾದನಾ ಸಾಮರ್ಥ್ಯವು ರಾಜ್ಯದ ಗ್ರಿಡ್‌ಗೆ ಸೇರ್ಪಡೆಗೊಳ್ಳುವ ನಿರೀಕ್ಷೆ ಇದೆ

8 ಅಲ್ಲದೇ ವಿದ್ಯುತ್ ನ ಗುಣಮಟ್ಟವನ್ನು ಸುಧಾರಿಸಲು ಹಾಗೂ ಓವರ್ ಲೋಡ್ ಸಮಸ್ಯೆಯನ್ನು ನಿವಾರಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು 477 ಹೊಸ ವಿದ್ಯುತ್ ಉಪ ಕೇಂದ್ರಗಳನ್ನು ನಿರ್ಮಾಣ ಮಾಡುವ ಮಹತ್ವಾಕಾಂಕ್ಷೆ ಯೋಜನೆಯನ್ನು ಹೊಂದಿದ್ದು, ಮುಂದಿನ 2–3 ವರ್ಷಗಳಲ್ಲಿ ಇವುಗಳನ್ನು ಹಂತ ಹಂತವಾಗಿ ಕಾರ್ಯಾರಂಭಗೊಳಿಸುವ ಗುರಿಯನ್ನು ಹೊಂದಲಾಗಿದೆ

9 ವಿದ್ಯುತ್ ಸರಬರಾಜು ಕಂಪನಿಗಳು ವಿತರಣಾ ವ್ಯವಸ್ಥೆಯಲ್ಲಿ ಹೊಸ 11 ಕೆ ವಿ ವಿದ್ಯುತ್ ಫೀಡರ್ ಗಳ ನಿರ್ಮಾಣ, ಫೀಡರ್‌ಗಳನ್ನು ಪುನರ್ ವಾಹಕಗೊಳಿಸುವುದು ಹೆಚ್ಚುವರಿ ವಿರತಣಾ ಟ್ರಾನ್ಸ್ ಫಾರ್ಮರ್‌ಗಳ ಅಳವಡಿಕೆ ಮುಂತಾದ ವ್ಯವಸ್ಥೆ ಸುಧಾರಣಾ ಕಾರ್ಯಗಳನ್ನು ನಿರ್ವಹಿಸುತ್ತಿವೆ

ಈ) ರಾಜ್ಯದಲ್ಲಿ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು 1999 ರಿಂದ ಅಸ್ತಿತ್ವದಲ್ಲಿದ್ದು, ಎಲ್ಲಾ ವರ್ಗಗಳ ವಿದ್ಯುತ್ ಬಳಕೆದಾರರಿಗೆ ವಿದ್ಯುತ್ ದರಗಳನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ನಿಗಧಿಪಡಿಸುತ್ತಿದೆ ವಿದ್ಯುತ್ ದರ ನಿಗಧಿಪಡಿಸುವಲ್ಲಿ ಪ್ರಸ್ತುತ ರಾಜ್ಯಾದ್ಯಂತ ಒಂದೇ ತೆರನಾದ ಮಾನದಂಡವನ್ನು ಅನುಸರಿಸಲಾಗುತ್ತಿದೆ

ವಿದ್ಯುತ್ ದರ ನಿಗಧಿಪಡಿಸುವಲ್ಲಿ ಸದ್ಯಕ್ಕೆ ನಗರ ಪ್ರದೇಶ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ಪ್ರತ್ಯೇಕವಾದ ಮಾನದಂಡವಿರುತ್ತದೆ ಬೆಂಗಳೂರು ಮತ್ತು ಇತರ ನಗರಗಳಲ್ಲಿನ ವಿದ್ಯುತ್ ಗ್ರಾಹಕರು ವಿದ್ಯುತ್ ಸರಬರಾಜಿನ ವಿಷಯದಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಹೋಲಿಸಿದಲ್ಲಿ ಹೆಚ್ಚಿನ ಅನುಕೂಲಗಳನ್ನು ಪಡೆಯುತ್ತಿರುವುದರಿಂದ, ಬೆಂಗಳೂರು ಮತ್ತು ಇತರ ನಗರ ಪ್ರದೇಶಗಳಿಗೆ ಸ್ವಲ್ಪ ಹೆಚ್ಚಿನ ವಿದ್ಯುತ್ ದರಗಳನ್ನು ಕರ್ನಾಟಕ ವಿದ್ಯುತ್

ನಿಯಂತ್ರಣ ಆಯೋಗವು ವಿಧಿಸಿರುತ್ತದೆ ಹಾಗೂ ಗ್ರಾಮಾಂತರ ಪ್ರದೇಶಗಳ ವಿದ್ಯುತ್ ಗ್ರಾಹಕರುಗಳಿಗೆ ರಿಯಾಯಿತಿಯನ್ನು ನೀಡಿ ಸ್ವಲ್ಪ ಕಡಿಮೆ ದರಗಳನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ವಿಧಿಸಿರುತ್ತದೆ

400 (819) ಶ್ರೀ ಪದ್ಮನಾಭ ಕೊಟ್ಟಾರಿ ಕೆ (ವಿಟ್ಲ): ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ ಎಷ್ಟು , ಹಾಗೂ ಎಷ್ಟು ಕೊರತೆ ಇದೆ,

ಆ) ಅವುಗಳನ್ನು ತುಂಬಲು ಸರ್ಕಾರದ ಕ್ರಮಗಳೇನು,

ಇ) ಅಂಗನವಾಡಿ ಕಾರ್ಯಕತೆಯರು ಮತ್ತು ಸಹಾಯಕಿಯರುಗಳಿಗೆ ನೀಡುತ್ತಿರುವ ಸಹಾಯಧನದ ಮೊತ್ತವನ್ನು ಹೆಚ್ಚಿಸುವ ಉದ್ದೇಶ ಸರ್ಕಾರಕ್ಕಿದೆಯೇ,

ಈ) ಅಂಗನವಾಡಿ ಮಕ್ಕಳಿಗೆ ಪೌಷ್ಠಿಕ ಆಹಾರವನ್ನು ನೀಡುವ ಬಗ್ಗೆ ಸರ್ಕಾರದ ಯೋಜನೆಗಳೇನು?

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ 1992 ಆಯ್ಕೆಯಾಗಬೇಕಾಗಿರುವ ಅಂಗನವಾಡಿ ಕಾರ್ಯಕರ್ತೆಯರ ಸಂಖ್ಯೆ 44

ಆ) ದಿನಾಂಕ 29 9 2006ರ ಆದೇಶದಲ್ಲಿ ರಾಜ್ಯ ಉಚ್ಚ ನ್ಯಾಯಾಲಯದ ತಡೆಯಾಜ್ಞೆ ಇದ್ದು ತಡೆಯಾಜ್ಞೆ ತೆರವಾದ ನಂತರ ಅಂಗನವಾಡಿ ಕಾರ್ಯಕರ್ತೆಯರ ಆಯ್ಕೆ ಮಾಡಲಾಗುವುದು

ಇ) ಹೌದು ರಾಜ್ಯ ಸರ್ಕಾರದ ವತಿಯಿಂದ ನೀಡುತ್ತಿರುವ ಗೌರವಧನವನ್ನು ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ಹೆಚ್ಚಿಸಲು ಪರಿಶೀಲಿಸಲಾಗುತ್ತಿದೆ

ಈ) ಅಂಗನವಾಡಿ ಕೇಂದ್ರಗಳಲ್ಲಿ 6 ತಿಂಗಳಿಂದ 6 ವರ್ಷದೊಳಗಿನ ಮಕ್ಕಳಿಗೆ ಪ್ರತಿದಿನ ರೂ 2/– ಮೌಲ್ಯದ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ